17	ಹಾಸನ	13.00	13.00
18	ರಾಮನಗರ	11.00	11.00
19	ಚಿಕ್ಕಬಳ್ಳಾಪುರ	9.00	9.00
20	ಧಾರವಾಡ	6.00	6.00
21	ಮೈಸೂರು	5.00	5.00
22	ಚಾಮರಾಜನಗರ	5.00	5.00
23	ಬೆಂಗಳೂರು (ಗ್ರಾ)	4.00	4.00
24	ಉತ್ತರ ಕನ್ನಡ	3.00	
25	ಬೆಂಗಳೂರು–ನಗರ	–	
26	ಮಂಡ್ಯ	2.00	2.00
27	ಕೋಲಾರ	–	
28	ದಕ್ಷಿಣ ಕನ್ನಡ	–	
29	ಕೊಡಗು	–	
30	ಉಡುಪಿ	–	
	ಒಟ್ಟು	**1000.00**	**689.00**

ಬಿ.ಎಂ.ಟಿ.ಸಿ ಬಸ್‌ಗಳನ್ನು ಜೆ.ಎಂ. ನರ್ಮ್ ಯೋಜನೆಯಡಿಯಲ್ಲಿ ಖರೀದಿ ಮಾಡಿರುವುದು

933 (1296) ಶ್ರೀ ಹೆಚ್.ಎನ್. ಶಿವಶಂಕರ್‌ರೆಡ್ಡಿ (ಗೌರಿಬಿದನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ.ಎನ್. ನರ್ಮ್ ಯೋಜನೆಯಡಿಯಲ್ಲಿ ಬಿ.ಎಂ.ಟಿ.ಸಿ ವತಿಯಿಂದ ಖರೀದಿ ಮಾಡಲಾದ ಬಸ್‌ಗಳು ಎಷ್ಟು; ಪ್ರತಿ ಬಸ್ಸಿನ ಖರೀದಿಯ ಮೊತ್ತ ಎಷ್ಟು;

ಆ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಖರೀದಿಸಲಾಗಿದೆ (ವಿವರ ನೀಡುವುದು);

ಇ) ಬಸ್ಸು ಖರೀದಿಗೆ ಜೆ.ಎಂ.ನರ್ಮ್ ಯೋಜನೆಯ ನಿಯಮಾವಳಿಗಳಿಗೆ ಆದ್ಯತೆ ನೀಡಲಾಗಿದೆಯೆ; ಆದ್ಯತೆಗಳನ್ನು ಬದಿಗೊತ್ತಿ ಬಸ್ಸುಗಳನ್ನು ಖರೀದಿಸಲಾಗಿದೆ ಎಂಬ ಆಪಾದನೆ ಇರುವುದು ನಿಜವಲ್ಲವೆ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಜೆ.ಎನ್. ನರ್ಮ್ ಯೋಜನೆಯಡಿಯಲ್ಲಿ ಬೆಂ.ಮ.ಸಾ. ಸಂಸ್ಥೆಯು ದಿ: 01–3–2010 ರವರೆಗೆ ಖರೀದಿಸಿರುವ ಬಸ್‌ಗಳು ಹಾಗೂ ಪ್ರತಿ ಬಸ್ಸಿನ ಖರೀದಿ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ:–

ಕ್ರ ಸಂ.	ಮಾದರಿ	ಬಸ್ಸುಗಳ ಸಂಖ್ಯೆ	ಪ್ರತಿ ಬಸ್ಸಿನ ಬೆಲೆ (ರೂ.ಗಳಲ್ಲಿ)
1	ಟಾಟಾ ನರ್ಮ್ 900 ಎಂಎಂ ಫ್ಲೋರ್ ಹೈಟ್ ಬಸ್ಸುಗಳು	362	
2	ಲೇಲ್ಯಾಂಡ್ ನರ್ಮ್ 900 ಎಂಎಂ ಫ್ಲೋರ್‌ಹೈಟ್ ಬಸ್ಸುಗಳು	250	22,01,781.00
3	ಟಾಟಾ ನರ್ಮ್ 650 ಎಂಎಂ ಫ್ಲೋರ್ ಹೈಟ್ ಎ/ಸಿ ಬಸ್ಸುಗಳು	98	21,99,028.00
4	ವೋಲ್ವೋ ನರ್ಮ್ 400 ಎಂಎಂ ಫ್ಲೋರ್ ಹೈಟ್ ಎ/ಸಿ ಬಸ್ಸುಗಳು	91	30,99,407.00
5	ವೋಲ್ವೋ ನರ್ಮ್ 400 ಎಂಎಂ ಫ್ಲೋರ್ ಹೈಟ್ ಎ/ಸಿ ಬಸ್ಸುಗಳು	49	78,18,750.00
	ಒಟ್ಟು	850	77,68,750.00

ಆ) ಭಾರತ ಸರ್ಕಾರವು ದಿನಾಂಕ: 2/1/2009 ರಂದು ರಾಜ್ಯಗಳಿಗೆ ನಗರ ಸಾರಿಗೆ ವ್ಯವಸ್ಥೆಗೋಸ್ಕರ 2ನೇ ಉತ್ತೇಜನ ಪ್ಯಾಕೇಜ್‌ನ ಅಡಿಯಲ್ಲಿ, ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ಖರೀದಿಸಲು ಆರ್ಥಿಕ ನೆರವು ನೀಡಲು ನಿರ್ಧರಿಸಿರುತ್ತದೆ.

ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದ ಸಿ.ಎಸ್.ಎಂ.ಸಿ. (CSMC) ಸಮಿತಿಯು ದಿನಾಂಕ:13/2/2009 ಮತ್ತು ದಿನಾಂಕ:26/2/2009 ರಂದು ನಡೆದ ಸಭೆಯಲ್ಲಿ ಬೆಂ.ಮ.ಸಾ.ಸಂಸ್ಥೆಗೆ JnNURM ಯೋಜನೆಯಡಿಯಲ್ಲಿ 1,000 ಬಸ್ಸುಗಳನ್ನು ಖರೀದಿಸಲು ಅನುಮೋದಿಸಿರುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೆಳಕಾಣಿಸಿರುವಂತೆ ಆರ್ಥಿಕ ಸಹಾಯ ನೀಡಿರುತ್ತವೆ/ ಇದರ ಜೊತೆಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಹ ಅದರ ಪಾಲನ್ನು ಭರಿಸಿರುತ್ತದೆ.

ರೂ. ಲಕ್ಷಗಳಲ್ಲಿ

ವಿವರ	ಯೋಜನೆ ಮೊತ್ತ	ಭಾರತ ಸರ್ಕಾರ (ಶೇ.35%)	ರಾಜ್ಯ ಸರ್ಕಾರ ಶೇ.15%)	ಬೆಂ.ಮ.ನ. ಸಾ.ಸಂಸ್ಥೆ (ಶೇ.50)	ಬಿಡುಗಡೆಗೊಳಿಸಿರುವ ಮೊತ್ತ		
					ಭಾರತ ಸರ್ಕಾರ	ಕರ್ನಾಟಕ ಸರ್ಕಾರ	ಬೆಂ.ಮ. ನ.ಸಾ. ಸಂಸ್ಥೆ
1000 ಬಸ್ಸುಗಳ ಖರೀದಿ	32382.00	11334.00	4857.00	16191.00	5681.00	2434.00	16.191.00

ಅದರಂತೆ ಸಂಸ್ಥೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮದಂತೆ, 1000 ಬಸ್ಸುಗಳನ್ನು ಅಡಿಗಟ್ಟು ತಯಾರಕರಿಂದ ಖರೀದಿಸಲು ಕ್ರಮಕೈಗೊಂಡು ಖರೀದಿ ಆದೇಶವನ್ನು ನೀಡಿರುತ್ತದೆ.

ಇ) ಜೆ.ಎನ್.ನರ್ಮ್ ಯೋಜನೆಯಡಿಯಲ್ಲಿ ಬಸ್ಸುಗಳನ್ನು ನಿಯಮಾವಳಿಗಳಿಗೆ ಅದ್ಯತೆ ನೀಡಿ ಖರೀದಿಸಲಾಗಿದೆ. ನರ್ಮ್ ಯೋಜನೆಯಡಿಯಲ್ಲಿ ಕರ್ನಾಟಕದಲ್ಲಿ ಖರೀದಿಸಿರುವ ಬಸ್ಸುಗಳ ಗುಣಮಟ್ಟದ ಮಾದರಿಯ ಬಗ್ಗೆ ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಇದೇ ಮಾದರಿಯ ಬಸ್ಸುಗಳನ್ನು ಅಳವಡಿಸಿಕೊಳ್ಳಲು ಇತರೆ ರಾಜ್ಯಗಳಿಗೆ ಸಲಹೆ ನೀಡಿರುತ್ತದೆ.